ಈ) ವಿಷಯ:- ಹಚ್.ಡಿ.ಕೋಟೆ ಮೂಲಕ ಕೇರಳ ರಾಜ್ಯಕ್ಕೆ ಸಂಪರ್ಕಿಸುವ ಮೈಸೂರು-ಮಹಾನಂದವಾಡಿ ರಾಜ್ಯ ಹೆದ್ದಾರಿ ಸಂಖ್ಯೆ:33ರಲ್ಲಿ ಬಾವಲಿಯಿಂದ 31 ಕಿ.ಮೀ. ಅರಣ್ಯ ಪ್ರದೇಶದಲ್ಲಿರುವ ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಅರಣ್ಯ ಇಲಾಖೆಯು ಒಪ್ಪಿಗೆ ನೀಡದಿರುವ ಬಗ್ಗೆ.

ಶ್ರೀ ಎಂ.ಸತ್ಯನಾರಾಯಣ (ಜಾಮುಂಡೇಶ್ವರಿ) (ಮಾನ್ಯ ಚಿಕ್ಕಣ್ಣರವರ ಪರವಾಗಿ) :- ಮಾನ್ಯ ಅಧ್ಯಕ್ಷರೆ, ಹೆಚ್.ಡಿ.ಕೋಟೆ ಮೂಲಕ ಕೇರಳ ರಾಜ್ಯಕ್ಕೆ ಸಂಪರ್ಕಿಸುವ ಮೈಸೂರು-ಮಹಾನಂದವಾಡಿ ರಾಜ್ಯ ಹೆದ್ದಾರಿ ಸಂಖ್ಯೆ:33ರಲ್ಲಿ ಬಾವಲಿಯಿಂದ 31 ಕಿ.ಮೀ. ಅರಣ್ಯ ಪ್ರದೇಶದಲ್ಲಿರುವ ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಅರಣ್ಯ ಇಲಾಖೆಯು ಒಪ್ಪಿಗೆ ನೀಡದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆ ನೀಡುತ್ತೇನೆ.

ಮೈಸೂರು-ಮಹಾನಂದವಾಡಿ ರಸ್ತೆ ರಾ.ಹೆ.-33 ರ ಒಟ್ಟು ಉದ್ದ 90 ಕಿ.ಮೀ ಆಗಿದ್ದು, ಈಗಾಗಲೇ ವಿಶ್ವಬ್ಯಾಂಕ ನೆರವಿನ ಕೆಶಿಪ್ ಯೋಜನೆಯ ವತಿಯಿಂದ ಮೈಸೂರು (0.00 ಸರಪಳಿಯಿಂದ 60 ಕಿ.ಮೀ ಸರಪಳಿ) ಹೆಚ್.ಡಿ.ಕೋಟೆ ಖಾನಾಪೂರದ ವರೆಗಿನ 60.00 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿದೆ. ಉಳಿಕೆ ರಸ್ತೆ (ಸರಪಳಿ 60.00 ಕಿ.ಮೀ ದಿಂದ ಸರಪಳಿ 91.00 ಕಿ.ಮೀ) 31.00 ಕಿ.ಮೀ ಇದ್ದು ರಾಜೀವ ಗಾಂಧಿ ರಾಷ್ಟ್ರೀಯ ಉದ್ಯಾನವನದ ಮೂಲಕ ಹಾದು ಹೋಗಿ ಬಾವಲಿ ಮುಖಾಂತರ ಕೇರಳ ರಾಜ್ಯದ ಗಡಿಯನ್ನು ಸೇರುತ್ತದೆ. ಈ ರಸ್ತೆ ಕಾಮಗಾರಿಯನ್ನು ಅಂದಾಜು ಮೊತ್ತ ರೂ.13.65 ಕೋಟಿಗೆ ಟೆಂಡರ್ ಕರೆದು ಅರಣ್ಯ ಇಲಾಖೆಯ ಅನುಮತಿಯೊಂದಿಗೆ ನವೆಂಬರ್ 2007 ರಲ್ಲಿ ಕಾಮಗಾರಿ ಪ್ರಾರಂಭಿಸಲಾಯಿತು. ಕಾಮಗಾರಿ ಪ್ರಗತಿ ಹಂತದಲ್ಲಿರುವಾಗ ಕೆಲವು ಪರಿಸರವಾದಿಗಳು ಸೆಂಟ್ರಲ್ ಎಂಪವರ್ಡ ಕಮೀಟಿ, ನವದೆಹಲಿ ಇವರಿಗೆ ಸರ್ವೋಚ್ಚ ನ್ಯಾಯಾಲಯದ ಅನುಮತಿ ಪಡೆದು ಕೆಲಸ ಮುಂದುವರಿಸಬೇಕೆಂದು ದೂರನ್ನು ದಾಖಲಿಸಿರುತ್ತಾರೆ. ಸೆಂಟ್ರಲ್ ಎಂಪವರ್ಡ ಕಮೀಟಿಯು ದಿನಾಂಕ : 31-3-2008 ರಂದು ಸ್ಥಳಕ್ಕೆ ಭೇಟಿ ನೀಡಿ, ದಿನಾಂಕ : 05-04-2008 ರಂದು ಸರ್ವೋಚ್ಚ ನ್ಯಾಯಾಲಯಕ್ಕೆ ವರದಿಯನ್ನು ನೀಡಿರುತ್ತಾರೆ.

ಈ ವರದಿಯ ಮೇರೆಗೆ ದಿನಾಂಕ : 10-11-2008 ರಂದು ಸರ್ವೋಚ್ಚ ನ್ಯಾಯಾಲಯವು ಕಾಮಗಾರಿ ಕೈಗೆತ್ತಿಕೊಳ್ಳಲು ಕೆಲವು ಷರತ್ತುಗಳೊಂದಿಗೆ ಅನುಮತಿ ನೀಡಿರುತ್ತದೆ. ಕರ್ನಾಟಕ ಸರ್ಕಾರ, ಅರಣ್ಯ ಇಲಾಖೆಯ ಅನುಮತಿಯೊಂದಿಗೆ ಈ ಕ್ಷೇತ್ರದಲ್ಲಿ ಕಾಮಗಾರಿ ಪ್ರಾರಂಭಿಸಿ ಡಿಸೆಂಬರ್ - 2009 ರೊಳಗೆ ಪೂರ್ಣಗೊಳಿಸಲಾಗುವುದು.

ಶ್ರೀ ಎಂ. ಸತ್ಯನಾರಾಯಣ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ ಹಾಗೆ ಈ ರಸ್ತೆಯ ಕಾಮಗಾರಿ ಆದಷ್ಟು ಬೇಗ ಪೂರ್ಣಗೊಂಡರೆ ಉತ್ತಮ. ಮೈಸೂರಿನಿಂದ ಅಲ್ಲಿಗೆ 40 ಕಿ.ಮೀ.ದೂರವನ್ನು ಒಂದು ಗಂಟೆಯಲ್ಲಿ ಪ್ರಯಾಣ ಮಾಡಬಹುದು. ಆದರೆ, ಅಲ್ಲಿಂದ ಮುಂದಕ್ಕೆ ಇರುವ 31 ಕಿ.ಮೀ. ದೂರದ ಪ್ರಯಾಣಕ್ಕೆ 3 ಗಂಟೆ ಸಮಯ ಬೇಕಾಗುತ್ತದೆ. ಈ ರಸ್ತೆಯಲ್ಲಿ ಸರಕು ಸಾಗಾಣಿಕೆಗೆ ಮತ್ತು ಪ್ರವಾಸೋದ್ಯಮಕ್ಕೆ ಅತೀ ಅವಶ್ಯಕವಾದ ರಸ್ತೆಯಾಗಿರುತ್ತದೆ. ತಾವು ಹೇಳಿದ ಸಮಯದಲ್ಲಿ ದಯವಿಟ್ಟು ಕಾರ್ಯಗತ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಈ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ :- 2009ನೇ ಡಿಸೆಂಬರ್‌ರೊಳಗಾಗಿ ಈ ಕಾರ್ಯಕ್ರಮವನ್ನು ಪೂರ್ತಿಗೊಳಿಸುತ್ತೇವೆಂದು ಭರವಸೆ ಕೊಡುತ್ತೇನೆ.

ಉ) ವಿಷಯ:- ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ವಾಹನ ದಟ್ಟಣೆ, ಅಪಘಾತಗಳನ್ನು ಕಡಿಮೆ ಮಾಡಲು ಹುಬ್ಬಳ್ಳಿ-ಧಾರವಾಡ ಮಹಾನಗರದ ಮುಖಾಂತರ ಹಾದು ಹೋಗುತ್ತಿರುವ ಹಳೇ ಪೂನಾ-ಬೆಂಗಳೂರು ರಸ್ತೆಯನ್ನು ಷಟ್ಪಥ ರಸ್ತೆಯನ್ನಾಗಿ ಮಾಡುವ ಹಾಗೂ ಸೋಲಾಪುರ ರಸ್ತೆ, ಗೂಟಿ ರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿ ನಂ.4ಗಳನ್ನು ಸಂಪರ್ಕಿಸುವಂತ ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಬಗ್ಗೆ.

ಶ್ರೀಮತಿ ಸೀಮಾ ಅಶೋಕ್ ಮಸೂತಿ (ಧಾರವಾಡ) :- ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ವಾಹನ ದಟ್ಟಣೆ, ಅಪಘಾತಗಳನ್ನು ಕಡಿಮೆ ಮಾಡಲು ಹುಬ್ಬಳ್ಳಿ-ಧಾರವಾಡ ಮಹಾನಗರದ ಮುಖಾಂತರ ಹಾದು ಹೋಗುತ್ತಿರುವ ಹಳೇ ಪೂನಾ-ಬೆಂಗಳೂರು ರಸ್ತೆಯನ್ನು ಷಟ್ಪಥ ರಸ್ತೆಯನ್ನಾಗಿ ಮಾಡುವ ಹಾಗೂ ಸೋಲಾಪುರ ರಸ್ತೆ, ಗೂಟಿ ರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿ ನಂ.4ಗಳನ್ನು ಸಂಪರ್ಕಿಸುವಂತೆ ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.